



ದಿನಾಂಕ:30-08-23 ಗೌರವಾನ್ವಿತ ಸಭಾಪತಿಗಳಾದ ಶ್ರೀ ಬಸವರಾಜ್ ಹೊರಟ್ಟಿ ಅವರು ತಮ್ಮ ಶಾಸಕರ ಪ್ರದೇಶ ಅಭಿವೃದ್ಧಿ ಅನುದಾನದ ಅಡಿಯಲ್ಲಿ ಧಾರವಾಡ ಜಿಲ್ಲೆ ಕುಂದಗೋಳ ತಾಲೂಕಿನ ರಾಮನ ಕೊಪ್ಪ ಗ್ರಾಮದ ನಿವಾಸಿ ಶಿವಾಜಿ ಗೋರ್ಪಡೆ ಅವರಿಗೆ ಇಂದು ತ್ರಿಚಕ್ರ ವಾಹನವನ್ನ ವಿತರಣೆ ಮಾಡಿದರು. ತಮ್ಮ ಅನುದಾನವನ್ನ ಯಾವುದೇ ಜಾತಿ ಮತ ಪಂಥ ನೋಡದೆ ಮತದಾರರು ಎಂದು ಗಮನದಲ್ಲಿಟ್ಟುಕೊಳ್ಳದೆ, ಎಲ್ಲ ಸಮುದಾಯಗಳಿಗೂ ಸರಿಯಾಗಿ ಹಂಚುವ ಮೂಲಕ "ಸರ್ವರಿಗೂ ಸಮಪಾಲು ಸರ್ವರಿಗೂ ಸಮ ಬಾಳು "ಎನ್ನುವ ತತ್ವದ ಅಡಿಯಲ್ಲಿ ಕಳೆದ ನಾಲ್ಕು ದಶಗಳಿಂದ ಕೆಲಸ ಮಾಡುತ್ತಾ ಬಂದಿದ್ದಾರೆ.

ಈ ಸಂದರ್ಭದಲ್ಲಿ ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಡಾ. ಲಿಂಗರಾಜ್ ಅಂಗಡಿ ನಿವೃತ್ತ ಮುಖ್ಯೋಪಾಧ್ಯಾಯ ಕಾಡದೇವರ ಮಠ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.